ಒ.ಎಸ್. -67 /2016
ಡಿ.ಡಬ್ಲ್ಯು - 01

**ದಿನಾಂಕ 10-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - ವಾದಿ ಪರ ಡಿಬಿಎಸ್ ವಕೀಲರಿಂದಃ**

ಕೆಎಸ್ ಹೆಗ್ಡೆರವರು ಕೊಟ್ಟ ಅವಾರ್ಡ್ ನಲ್ಲಿ 24 ಅಡಿ ಅಗಲದ ರಸ್ತೆಯನ್ನು ಸರ್ವೆ ನಂ 177/3 ರಲ್ಲಿ ಇಟ್ಟಿರುತ್ತಾರೆ ಎಂದರೆ ಸಾಕ್ಷಿ ಎಸ್ ಆರ್ ಹೆಗ್ಡೆ ರವರು ಕೊಟ್ಟ ಅವಾರ್ಡ್ ನ ಆದಾರದ ಮೇಲೆ ನಾನು ಕ್ರಯಕ್ಕೆ ತೆಗೆದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ . ಎಸ್ ಆರ್ ಹೆಗ್ಡೆ ರವರು ಕೊಟ್ಟ ಅವಾರ್ಡ್ ನಲ್ಲಿ ರಸ್ತೆಗಾಗಿ ಜಾಗವನ್ನು ಮೀಸಲು ಇಟ್ಟಿದ್ದಾರೆ. 2 ನೇ ಪ್ರತಿವಾದಿ ವಿಂಗಡಿಸ್ಪಲ್ಪ ಹಿಸ್ಸೆಯ ದಕ್ಷಿಣ ಭಾಗದಲ್ಲಿ ಆ ರಸ್ತೆಯನ್ನು ಊರ್ಜಿತವಾಗಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಆ ರಸ್ತೆಯನ್ನು ನನಗೆ ಕ್ರಯಪತ್ರವಾದ ಜಾಗದ ಉತ್ತರಕ್ಕೆ ಇಟ್ಟಿರುತ್ತಾರೆ. ನನ್ನ ಜಾಗದ ಉತ್ತರಕ್ಕೆ ರಸ್ತೆಯನ್ನು ಮೀಸಲು ಇಟ್ಟಿದ್ದಾರೆ ಎಂಬ ಬಗ್ಗೆ ಎಸ್ ಆರ್ ಹೆಗ್ಡೆ ರವರು ಕೊಟ್ಟ ಅವಾರ್ಡ್ ನಲ್ಲಿ ಕಂಡುಬರುತಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಂಡುಬರುತಿದೆ ಎಂದು ತಿಳಿಸಿರುತ್ತಾರೆ. ನಾವು ಖರೀದಿ ಮಾಡಿದ ಜಾಗದ ಉತ್ತರಕ್ಕೆ ಮಾಯ ಶೆಟ್ಟಿ ರವರ ಜಾಗ ಇರುತ್ತದೆ. ಸಾಕ್ಷಿ ಮುಂದುವರಿದ ಉತ್ತರಕ್ಕೆ ರಸ್ತೆ ಇದ್ದು ತದನಂತರ ಮಾಯಶೆಟ್ಟಿರವರ ಜಾಗ ಇರುತ್ತದೆ. ನಮ್ಮ ಜಾಗದ ದಕ್ಷಿಣ ಭಾಗದಲ್ಲಿ ರೂಪಾ ಶೆಟ್ಟಿ ಅಂದರೆ ವಾದಿಯ ಜಾಗ ಇರುತ್ತದೆ.

ಪ್ರತಿವಾದ ಪತ್ರದ ಐಟಂ ನಂ 1 ಮತ್ತು 2 ರುಕ್ಮುಣಿ ಹೆಗ್ಡೆ ರವರಿಂದ ಖರೀದಿಸಿದ ಸ್ವತ್ತಾಗಿರುತ್ತದೆ. ನಾನು ವಾಸ ಮಾಡಿಕೊಂಡಿರುವ ಮನೆ ಸರ್ವೆ ನಂ 176/1 ರಲ್ಲಿ ಇರುತ್ತದೆ. ಪ್ರತಿವಾದ ಪತ್ರದ 4 ನೇ ಐಟಂ ಸ್ವತ್ತನ್ನು ಕೂಡ ರುಕ್ಮುಣಿ ಹೆಗ್ಡೆ ರವರಿಂದ ನಾನು ಖರೀದಿಸಿರುತ್ತೇನೆ. ನಾನು ರುಕ್ಮುಣಿ ಹೆಗ್ಡೆ ರವರಿಂದ ಸ್ವತ್ತನ್ನು ಖರೀದಿಸುವಾಗ ಎಸ್ ಆರ್ ಹೆಗ್ಡೆ ರವರ ಅವಾರ್ಡ್ ನ್ನು ಪರಿಶೀಲಿಸಿಯೇ ಮತ್ತು ಅದರ ಆದಾರದ ಮೇಲೆಯೇ ಖರೀದಿಸಿರುತ್ತೇನೆ . ರುಕ್ಮುಣಿ ಹೆಗ್ಡೆ ರವರ ಜಮೀನಿನ ಪೂರ್ವ ಭಾಗದಲ್ಲಿ ರೂಪಾ ಶೆಟ್ಟಿ ಅಂದರೆ ವಾದಿ ರವರ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು 7 ನೇ ಪ್ರತಿವಾದಿ ಮಾಯ ಶೆಟ್ಟಿ ರವರ ಜಮೀನು ಇರುತ್ತದೆ ಎಂದು ತಿಳಿಸಿರುತ್ತಾರೆ. ಸದ್ರಿ ಮಾಯಾ ಶೆಟ್ಟಿ ರವರ ಜಮೀನು ಎಂದು ಎಸ್ ಆರ್ ಹೆಗ್ಡೆ ರವರ ಅವಾರ್ಡ್ ನಲ್ಲಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

ನಾವು ಖರೀದಿಸಿದ ಜಮೀನುಗಳ ಪೈಕಿ ರುಕ್ಮುಣಿ ಹೆಗ್ಡೆ ರವರಿಂದಖರೀದಿಸಿದ ಜಮೀನನ್ನು ಬಿಟ್ಟು ಬೇರೆಯವರಿಂದ ಖರೀದಿಸಿದ ಜಾಗದಲ್ಲಿ ಯಾವುದೇ ಕಟ್ಟಡ ಇಲ್ಲ. ಸಾಕ್ಷಿ ಮುಂದುವರಿದು ಆದರೇ ಫೆನ್ಸಿಂಗ್ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ . ಫೆನ್ಸಿಂಗ್ ನ್ನು 1994-95 ರಲ್ಲಿ ಮಾಡಿರುತ್ತೇನೆ . ನಾನು ಖರೀದಿ ಮಾಡುವ ಪೂರ್ವದಲ್ಲಿ ಫೆನ್ಸಿಂಗ್ ಇರಲಿಲ್ಲ ಆದರೇ ಕಲ್ಲನ್ನು ಹಾಕಿದ್ದರು. ಕಲ್ಲು ಎಂದರೆ ಗಡಿ ಕಲ್ಲು ಅಲ್ಲ ಆದರೇ ಸದ್ರಿ ಜಮೀನಿನ ಫೆನ್ಸಿಂಗ್ ರೀತಿ ದೂರ ದೂರದಲ್ಲಿ ಕಲ್ಲನ್ನು ಗುರುತಿಸುವಿಕೆಗಾಗಿ ಹಾಕಿದ್ದರು. ನಾನು ಈಗ ಹೇಳಿದ ರೀತಿ ಕಲ್ಲುಗಳು ಇದ್ದವು ಎಂದು ನಾನು ಪ್ರತಿವಾದ ಸಲ್ಲಿಸುವ ಸಮಯದಲ್ಲಿ ಆಗಲೀ ಅಥವಾ ಮುಖ್ಯವಿಚಾರಣೆ ಪತ್ರದಲ್ಲಿ ಹೇಳಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳಿದ್ದೇನೆ ಎಂದು ತಿಳಿಸಿರುತ್ತಾರೆ .

ನಾನು ಖರೀದಿಸಿದ ಜಮೀನಿನ್ನು ಅಳತೆ ಮಾಡಿಸಿದ್ದೇನೆ. ಆದರೇ ಆಗಲೇ ಬೇಲಿ ಹಾಕಲಿಲ್ಲ . ಖರೀದಿ ಮಾಡಿದ ಎಷ್ಟು ದಿನದ ನಂತರ ಅಳತೆ ಮಾಡಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅಳತೆ ಮಾಡಿಸಿಯೇ ಖರೀದಿ ಮಾಡಿದ್ದೇನೆ ಎಂದು ತಿಳಿಸಿರುತ್ತಾರೆ. ಖರೀದಿಸಿದ ನಂತರ ಅಳತೆ ಮಾಡಿಸಿದ ಬಗ್ಗೆ ನಕ್ಷೆಯನ್ನು ಹಾಜರುಪಡಿಸಿದ್ದೇನೆ. ಖರೀದಿ ಪತ್ರದ ಜೊತೆ ಲಗತ್ತಿಕರಿಸಿದ ನಕ್ಷೆ ಬಿಟ್ಟರೇ ಬೇರೆ ನಕ್ಷೆಯನ್ನು ಹಾಜರುಪಡಿಸಿಲ್ಲ. ನನ್ನ ಮುಖ್ಯವಿಚಾರಣೆಯ ಪ್ಯಾರಾ ನಂ 14 ರಲ್ಲಿ ಲಿಂಕ್ಸ್ ಗಳ ಬಗ್ಗೆ ಹೇಳಿದ್ದು ಆ ರೀತಿ ಹೇಳಲು ನಾನು ಅಳತೆ ಮಾಡಿಸಿರುತ್ತೇನೆ . ಸಾಕ್ಷಿಮುಂದುವರಿದು ಎಸ್ ಆರ್ ಹೆಗ್ಡೆ ಅವಾರ್ಡ್ ಆದಾರದ ಮೇಲೆ ಪ್ಯಾರಾ ನಂ 14 ರಲ್ಲಿ ಲಿಂಕ್ಸ್ ಗಳ ಬಗ್ಗೆ ಹೇಳಿರುತ್ತೇನೆ . ಪ್ಯಾರಾ 14 ರಲ್ಲಿ ಹೇಳಿರುವ ಅಂಶಗಳು ವಾಸ್ತಾವ ಅಂಶಕ್ಕೆ ದೂರವಾಗಿದೆ ಮತ್ತು ಅದರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಯಾವ ಕಾರಣಕ್ಕೆ ದಾವೆ ಹಾಕಿದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಜಾಗಕ್ಕೆ ಅತೀಕ್ರಮಣ ಪ್ರವೇಶ ಮಾಡಬಾರದು ಎಂದು ನಾನು ದಾವೆ ಹಾಕಿದ್ದೇನೆ . ನಾನು ದಾವೆ ಹಾಕುವ ಸಮಯದಲ್ಲಿ ರೂಪಾ ಶೆಟ್ಟಿರವರ ಜಮೀನು ಭೂ ಪರಿವರ್ತನೆಗೊಂಡಿತ್ತು ಎಂದರೆ ಸರಿ . ಆ ಭೂ ಪರಿವರ್ತನೆಗೊಂಡಂತೆ ರೂಪಾ ಶೆಟ್ಟಿರವರು ಸದರಿ ಜಾಗದಲ್ಲಿ ಬೇಲಿ ಹಾಕಿದ್ದರು ಎಂದರೆ ಸರಿಯಲ್ಲ. ನಾವು ರೂಪಾ ಶೆಟ್ಟಿರವರ ವಿರುದ್ಧ ಯಾವುದೇ ಪರಿಹಾರವನ್ನು ಕೇಳಿಲ್ಲ, ಆದರೇ ನಾವು ಮಾಯ ಶೆಟ್ಟಿರವರ ವಿರುದ್ಧ ಜಮೀನಿನ ಮೇಲೆ ಕೇಳುತಿದ್ದೇವೆ. ರೂಪಾ ಶೆಟ್ಟಿ ರವರು ನಿಮ್ಮ ಜಮೀನಿನ ಬಳಿ ಬಂದು ತಕರಾರು ಮಾಡಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ರೂಪಾ ಶೆಟ್ಟಿರವರ ಜಿಪಿಎ ಹೋಲ್ಡರ್ ಎಂದುಕೊಂಡು ರಾಮಚಂದ್ರ ನಾಯಕ್ ರವರು ನಮ್ಮ

ಜಮೀನಿನ ಬಳಿ ಬಂದು ಅತೀಕ್ರಮಣ ಪ್ರವೇಶಕ್ಕೆ ಪ್ರಯತ್ನಪಟ್ಟಿರುತ್ತಾರೆ ಮತ್ತು ಅವರು ಇದು ನಮಗೆ ಸೇರಬೇಕಾದ ಜಮೀನು ಎಂದು ಹೇಳಿರುತ್ತಾರೆ . ರಾಮಚಂದ್ರ ನಾಯಕ್ ರವರು ರೂಪ ಶೆಟ್ಟಿರವರ ಜಿಪಿಎ ಹೋಲ್ಡರ್ ಎಂದು ಹೇಳಿಕೊಂಡು ಬಂದು ಸದ್ರಿ ನಮ್ಮ ಸ್ವಾಧೀನದಲ್ಲಿ ಇದ್ದ ಜಮೀನು ರೂಪಾ ಶೆಟ್ಟಿರವರಿಗೆ ಸೇರಬೇಕು ಎಂದು ಹೇಳಿದ ಜಮೀನು ರುಕ್ಮಿಣಿ ಹೆಗ್ಡೆ ರವರ ಜಮೀನಿನ ಪೂರ್ವ ಭಾಗಕ್ಕೆ ಇರುವ ಜಾಗಕ್ಕೆ ಸಂಬಂದಪಟ್ಟಂತೆ ಹೇಳಿರುತ್ತಾರೆ. ರುಕ್ಮಿಣಿ ಹೆಗ್ಡೆ ರವರ ಜಮೀನಿನ ಪೂರ್ವ ಬದಿಯಲ್ಲಿ ರೂಪಾ ಶೆಟ್ಟಿರವರು ಭೂ ಪರಿವರ್ತನೆ ಮಾಡಿದ ಜಮೀನು ಇದೆ ಎಂದರೆ ಸಾಕ್ಷಿ ಮಾಯಾ ಶೆಟ್ಟಿ ರವರ ಜಮೀನಿನ ಪೂರ್ವದಲ್ಲಿ ರೂಪಾ ಶೆಟ್ಟಿರವರ ಜಾಗ ಇರುತ್ತದೆ ಎಂದು ತಿಳಿಸಿರುತ್ತಾರೆ. ಮಾಯಾ ಶೆಟ್ಟಿರವರಿಗೆ ಸೇರಿದ 4 ಎಕ್ರೆ 33 ಸೆಂಟ್ಸ್ ಜಾಗದ ಪೂರ್ವ ಬದಿಯಲ್ಲಿ ರೂಪಾ ಶೆಟ್ಟಿರವರಿಗೆ ಸೇರಿದ 5 ಎಕ್ರೆ ಜಾಗ ಇತ್ತು ಎನ್ನುವ ಬಗ್ಗೆ ದಾಖಲೆಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಸ್ ಆರ್ ಹೆಗ್ಡೆರವರ ಅವಾರ್ಡ್ ನಲ್ಲಿ ಪೂರ್ವ-ದಕ್ಷಿಣ ಕಡೆಗೆ ಕಾಣಿಸಿರುತ್ತಾರೆ ಎಂದು ತಿಳಿಸಿರುತ್ತಾರೆ . ಎಸ್ ಆರ್ ಹೆಗ್ಡೆರವರ ಅವಾರ್ಡ್ ನಲ್ಲಿ ಮಾಯ ಶೆಟ್ಟಿ ರವರ ಜಾಗದ ಪೂರ್ವಕ್ಕೆ ರೂಪಾ ಶೆಟ್ಟಿ ರವರ ಜಾಗ ಇದೆ ಎಂದು ಕಾಣಿಸಿಲ್ಲ ಎಂದರೆ ಸಾಕ್ಷಿ ಪೂರ್ವ ದಕ್ಷಿಣಕ್ಕೆ ಕಾಣಿಸಿರುತಾರೆ ಎಂದು ತಿಳಿಸಿರುತ್ತಾರೆ . ರಾಮಚಂದ್ರ ನಾಯಕ್ ರವರು ನಮ್ಮ ಜಾಗದ ಬಳಿ ಬಂದು ನಾವು ಹಾಕಿದ ಬೇಲಿಯನ್ನು ತೆಗೆಯಲಿಲ್ಲ . ರಾಮಚಂದ್ರ ನಾಯಕ್ ರವರು ನನಗೆ ಬೆದರಿಸಿಲ್ಲ ಮತ್ತು ಬೈದಿಲ್ಲ. ರಾಮಚಂದ್ರ ನಾಯಕ್ ರವರ ವಿರುದ್ಧ ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. ರಾಮಚಂದ್ರ ನಾಯಕ್ ರವರು ನಮ್ಮ ಜಾಗದ ಬಳಿ ಬಂದು ಉಪದ್ರ ಮಾಡಿದಾಗ ನಾವು ಅಳತೆ ಮಾಡಿಸುವ ಎಂದು ನಾನು ಹೇಳಿರುತ್ತೇನೆ ಆದರೇ ಅವರು ಕೇಳಿಲಿಲ್ಲ. ರಾಮಚಂದ್ರ ನಾಯಕ್ ರವರು ನಮ್ಮ ಜಾಗದ ಬಳಿ 2-3 ಬಾರಿ ಬಂದಿರುತ್ತಾರೆ. ತದನಂತರ ನಾವು ನೇರವಾಗಿ ನ್ಯಾಯಲಯದಲ್ಲಿ ಅಸಲು ದಾವಾ ಸಂಖ್ಯೆ 351/2013( ಈಗ ಅದು 37/2021 ಆಗಿರುತ್ತದೆ )

ನ್ನು ಹಾಕಿರುತ್ತೇವೆ. ರಕ್ಮಣಿ ಹೆಗ್ಡೆಯ ಜಾಗದ ಪೂರ್ವ ಬದಿಯಲ್ಲಿ ರೂಪ ಶೆಟ್ಟಿರವರ ಜಾಗ ಇದೆ ಎಂದು ರೂಪ ಶೆಟ್ಟಿ ರವರು ಸಾಧನೆ ಮಾಡುತ್ತಿರುವುದು ಸರಿ ಇರುವುದಿಲ್ಲ. ಈಗ ಜಮೀನನ್ನು ಅಳತೆ ಮಾಡಲು ನಮ್ಮ ಅಭ್ಯಂತರ ಇದೆ . ಸಾಕ್ಷಿ ಮುಂದುವರಿದು ಈಗಾಗಲೇ ನ್ಯಾಯಲಯದ ನಿಯೋಗಿ ಮುಖೇನ ಅಳತೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ . ರೂಪ ಶೆಟ್ಟಿ ರವರು ನ್ಯಾಯಲಯದ ನಿಯೋಗಿ ಸಲ್ಲಿಸಿರುವ ವರದಿ ಸರಿ ಇರುವುದಿಲ್ಲ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸದ್ರಿ ತಕರಾರು ಸುಳ್ಳು ಎಂದು ತಿಳಿಸಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು,**

**ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.